ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 28-02-2024 ರಂದು ಬೊಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಪಿ ಕೆ ಟಿ ನ್ಯಾಯವಾದಿರವರಿಂದಃ

ನಾನು ದಿಃ 23-03-2020 ರಂದು ಹಾಗೂ 22-10-2020 ರಂದು ಪ್ರತಿವಾದಿಗೆ ನೋಟೀಸ ಕಳುಹಿಸಿರುತ್ತೇನೆ. ನಾನು ಪ್ರತಿವಾದಿಯ ಕಾರವಾರ ನ್ಯಾಯಾಲಯದ ವಿಳಾಸಕ್ಕೆ ಸದರಿ ನೋಟೀಸಗಳನ್ನು ಕಳುಹಿಸಿರುತ್ತೇನೆ. ನಾನು ಪ್ರತಿವಾದಿಗೆ ನೋಟೀಸ ಕಳುಹಿಸಿರುತ್ತೇನೆ ಎಂದು ಹೇಳಲಾದ ಸಮಯದಲ್ಲಿ ಕೋವಿದ್ -19 ವ್ಯಾಪಕವಾಗಿ ಆವರಿಸಿತ್ತು ಎಂದರೆ ಸರಿ. ಸಾಕ್ಷಿಯು ಸ್ವತಃ ಅದಕ್ಕೆ ನಾನು ಎರಡೆರಡು ಬಾರಿ ನೋಟೀಸ ಕಳುಹಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ಸದರಿ ನೋಟೀಸ door lock ಎಂದು ಹಿಂದಿರುಗಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಅದನ್ನು ನಿರಾಕರಿಸಿರುತ್ತೀರಿ ಎಂದು ಹಿಂದಿರುಗಿ ಬಂದಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿ.ಪಿ -6 ನ್ನು ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಾನು ನಿ.ಪಿ-6 ರಲ್ಲಿ door lock ಎಂದು ನಮೂದಿದ್ದರೂ ಸಹಿತ ಸ್ವೀಕರಿಸರಿಸಲು ನಿರಾಕರಿಸಿರುತ್ತೇನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ನೀಡಿದ ನೋಟೀಸನಲ್ಲಿ ಪದ್ಮಾ ತಾಂಡೆಲ್ ಜಿಲ್ಲಾ ನ್ಯಾಯಾಲಯದ ನಿವಾಸಿ ಎಂದು ಬರೆಸಿರುತ್ತೀರಿ ಮತ್ತು ಈ ಬಗ್ಗೆ ಅವರು ಜಿಲ್ಲಾ ನ್ಯಾಯಾಲಯದಲ್ಲಿ ವಾಸವಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದಿಯು ಜಿಲ್ಲಾ ನ್ಯಾಯಾಲಯದಲ್ಲಿ ವಕೀಲ ವೃತ್ತಿ ಮಾಡುವುದು ಗೊತ್ತಿದ್ದರಿಂದ ನಾನು ಆ ವಿಳಾಸಕ್ಕೆ ಕಳುಹಿಸಿರುತ್ತೇನೆ ಎಂದು ಉತ್ತರಿಸುತ್ತಾರೆ.

ಸದರಿ ನೋಟೀಸಗಳನ್ನು ನೀಡಿದ ಸಮಯದಲ್ಲಿ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ಕೋವಿದ್ 19 ಎಸ್ ಓ ಪಿ ಪ್ರಕಾರ ಯಾವುದೇ ಕಲಾಪಗಳನ್ನು ನ್ಯಾಯಾಲಯ ನಡೆಸುತ್ತಿರಲಿಲ್ಲ ಆ ಸಮಯದಲ್ಲಿ ಜಿಲ್ಲಾ ಬಾರ್ ಅಸೋಸಿಯೇಶನ್ ಬಂದ್ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ವಿರುದ್ಧ ಮಾನಹಾನಿ ಪ್ರಕಟಣೆಯನ್ನು Karwar ladies watsapp group ನಲ್ಲಿ ಕಳುಹಿಸಿರುತ್ತಾರೆ. ದಿಃ 19-03-2020 ರಂದು ಕಳುಹಿಸಿದ ಮೆಸೆಜ್ ನಲ್ಲಿ ಎಲ್ಲಿಯೂ ವಾದಿಯ ಹೆಸರು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು lady representative ಎಂದು ಬರೆದಿದ್ದು, ಆ ಸಮಯದಲ್ಲಿ ನಾನೊಬ್ಬಳೇ ಮಾತ್ರ lady representative ಇದ್ದು ಬೇರೇ ಯಾರು lady representative ಇಲ್ಲದೇ ಇದ್ದುದರಿಂದ ಆ ಸಂದೇಶವನ್ನು ನನ್ನನ್ನು ಉದ್ದೇಶಿಸಿ ಬರೆದಿದ್ದು, ಆ ಬಗ್ಗೆ ದಾಖಲೆಗಳನ್ನು ನಾನು ಹಾಜರುಪಡಿಸಿರುತ್ತೇನೆ ಎಂದು ಸಾಕ್ಷ ನುಡಿಯುತ್ತಾರೆ. ಸದರಿ ಸಂದೇಶ ದೂರವಾಣಿ ಸಂಖ್ಯೆ 9538116839 ಯಿಂದ ಬಂದಿರುತ್ತದೆ. ಕೂಡಲೇ ನೀವು ಪ್ರತಿವಾದಿಯನ್ನು ಸದರಿ



group ನಿಂದ remove ಮಾಡಿರುತ್ತೀರಿ ಎಂದರೆ ಸರಿ. ಸಾಕ್ಷಿಯು ಸ್ವತಃ ಸದರಿ ಸಂದೇಶದಿಂದ ಎಲ್ಲರೂ ನನ್ನ ಮೇಲೆ ಆರೋಪವನ್ನು ಮಾಡಲು ಪ್ರಾರಂಭ ಮಾಡಿದಾಗ, ಸದರಿ ವಿಷಯವು ಮುಂದುವರೆಯ ಬಾರದು

ಎನ್ನುವ ಉದ್ದೇಶದಿಂದ ನಾನು ಪ್ರತಿವಾದಿಯನ್ನು ಸದರಿ group ನಿಂದ remove ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ಹಾಗೇ ಪ್ರತಿವಾದಿಯನ್ನು remove ಮಾಡಿದ ನಂತರ ಎಲ್ಲಾ ಸದಸ್ಯರು ತಾನಾಗಿ ಸದರಿ group ನಿಂದ exit ಆಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಸದರಿ group ಇನ್ನು ಚಾಲ್ತಿಯಲ್ಲಿ ಇರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ group ನ admin ಆಗಿದ್ದುದರಿಂದ ನಾನು ಇಂದಿಗೂ ಸದರಿ group ನ್ನು ಚಾಲ್ತಿಯಲ್ಲಿ ಇಟ್ಟಿರುತ್ತಾನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ನ್ಯಾಯಾವಾದಿರವರು ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**
**ಸಿವಿಲ್ ನ್ಯಾಯಾಧೀಶರು ಕಾರವಾರ**